ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ನಂದಿನಗರ,ಬೀದರ–585 226 ಕರ್ನಾಟಕ, ಭಾರತ

**KARNATAKA VETERINARY, ANIMAL & FISHERIES SCIENCES UNIVERSITY**
Nandinagar, PB No.6, BIDAR-585226, KARNATAKA, INDIA

# ವಿವರಣಾ ಪುಸ್ತಕ - 2025–26

# PROSPECTUS - 2025-26

## ಡಿಪ್ಲೊಮಾ (ಪಶು ಸಂಗೋಪನೆ), (ಎರಡು ವರ್ಷದ ಕೋರ್ಸ್)

## Diploma (Animal Husbandry), (Two Years Course)

## ಕುಲಸಚಿವರು

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ ನಂದಿನಗರ,ಬೀದರ–585 226 ಕರ್ನಾಟಕ, ಭಾರತ

## ಪ್ರಮುಖ ಸೂಚನೆಗಳು

**ಅಭ್ಯರ್ಥಿಗಳು 'ವಿವರಣಾ ಪುಸ್ತಕ' ಅತ್ಯಂತ ಎಚ್ಚರಿಕೆಯಿಂದ ಓದಿ ಅರ್ಥಮಾಡಿಕೊಳ್ಳಲು / ಮನನ ಮಾಡಿಕೊಳ್ಳಲು ಸೂಚಿಸಿದೆ.**

1. ಅಭ್ಯರ್ಥಿಗಳು ಡಿಪ್ಲೊಮಾ (ಪಶುಸಂಗೋಪನೆ) 2025ಕ್ಕಾಗಿ ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸಬೇಕು
2. ವಿವರಣಾ ಪುಸ್ತಕ ಅನ್ನು https://kvafsu.edu.in/admission.html ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿ ಕೊಳ್ಳಬಹುದು.
3. ವಿಶ್ವವಿದ್ಯಾಲಯದ ವೆಬ್‌ಸೈಟ್ https://kvafsu.edu.in/admission.html ನಲ್ಲಿಒದಗಿಸಿರುವ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಿ ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಆನ್‌ಲೈನ್ ಅರ್ಜಿ ಕುರಿತು ಪೂರ್ಣ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ 'ವಿವರಣಾ ಪುಸ್ತಕ' ನಲ್ಲಿ ಒದಗಿಸಲಾಗಿದೆ
4. ವಿಶ್ವವಿದ್ಯಾಲಯದ ವೆಬ್‌ಸೈಟ್ https://kvafsu.edu.in/admission.htmlನಲ್ಲಿ 'ವಿವರಣಾ ಪುಸ್ತಕ' ನಲ್ಲಿ ನೀಡಿರುವ ಸೂಚನೆಗಳನ್ನು ಅಭ್ಯರ್ಥಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳನ್ನು ಯಾವುದೇ ಕಾರಣ ನೀಡದೆ ಅನರ್ಹಗೊಳಿಸಲಾಗುವುದು.
5. ಅಭ್ಯರ್ಥಿಗಳು ಮುಂದಿನ ಎಲ್ಲಾ ಪ್ರಕ್ರಿಯೆಗಳ ಸಂಪರ್ಕ ವ್ಯವಹಾರಗಳಿಗಾಗಿ ಈ ಕೆಳಕಂಡ ದಾಖಲೆಗಳನ್ನುತಮ್ಮೊಂದಿಗೆ ಉಳಿಸಿಕೊಳ್ಳಬೇಕು
   - ಅಂತಿಮವಾಗಿ ಸಲ್ಲಿಕೆ ಮಾಡಿದ ಆನ್‌ಲೈನ್ ಅರ್ಜಿಯ ಪ್ರತಿಗಳು;
   - ಅರ್ಜಿ ಶುಲ್ಕ ಪಾವತಿ ಮಾಡಿದ ವಿವರ / ರಶೀದಿ;
   - ಆನ್‌ಲೈನ್ ಅರ್ಜಿಯಲ್ಲಿ ಸ್ಕ್ಯಾನ್ ಮಾಡಿ ಸಲ್ಲಿಕೆಮಾಡಿರುವ ದಾಖಲೆಗಳು.
6. ಅ) ಆನ್‌ಲೈನ್ ಅರ್ಜಿಯಲ್ಲಿ ನೀಡಿರುವ ಮೊಬೈಲ್ ಫೋನ್ ಸಂಖ್ಯೆ, ಇ-ಮೇಲ್ ವಿಳಾಸ, ಅಭ್ಯರ್ಥಿ/ಪೋಷಕರದೆ ಆಗಿರಬೇಕು, ಏಕೆಂದರೆ ವಿಶ್ವವಿದ್ಯಾಲಯದಿಂದ ಅವಶ್ಯಕತೆ/ತುರ್ತು ಸಂದರ್ಭಗಳಲ್ಲಿ ಯಾವುದೇ ಮಾಹಿತಿ / ವಿಷಯಗಳನ್ನು ಇವುಗಳ ಮುಖಾಂತರವೇ ಎಸ್‌ಎಂಎಸ್ ಅಥವಾ ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ;

   ಆ) ಆನ್‌ಲೈನ್ ಅರ್ಜಿಯಲಿ ತಪ್ಪು ಮೊಬೈಲ್ ಸಂಖ್ಯೆ ಅಥವಾ ತಪ್ಪು ಇ-ಮೇಲ್ ವಿಳಾಸ ನೀಡಿದ ಕಾರಣದಿಂದ ಯಾವುದೇ ಮಾಹಿತಿ ತಲುಪದಿದ್ದಲ್ಲಿ ಅದಕ್ಕೆ ಅಭ್ಯರ್ಥಿ / ಪೋಷಕರೆಗಳೇ ಪೂರ್ಣ ಹೊಣೆಗಾರರಾಗುತ್ತಾರೆ.
7. ಅಂತಿಮ ಸುತ್ತಿನ ಸೀಟು ಹಂಚಿಕೆ ಪೂರ್ಣಗೊಳ್ಳುವರೆಗೂ ಅಭ್ಯರ್ಥಿಗಳು ಇತ್ತೀಚಿನ ಮಾಹಿತಿ/ವಿಷಯಗಳಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ https://kvafsu.edu.in/admission.html ನೊಂದಿಗೆ ಸದಾ ಸಂಪರ್ಕದಲ್ಲಿರಬೇಕು
8. ಅಭ್ಯರ್ಥಿಗಳು/ ಪೋಷಕರು, ಯಾವುದೇ ಇತ್ತೀಚಿನ ಸುದ್ದಿ ಅಥವಾ ಮಾಹಿತಿಗಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್ https://kvafsu.edu.in/admission.html ಗೆ ಆಗಿಂದಾಗ್ಗೆ ಭೇಟಿ ನೀಡುವುದು, ಹಾಗೆಯೇ ತಮ್ಮ ಮೊಬೈಲ್ ಫೋನ್ / ಇ-ಮೇಲ್ಮುಖಾಂತರ ಪ್ರಾಧಿಕಾರವು ತುರ್ತು ಸಂದೇಶ ಅಥವಾ ಮಾಹಿತಿ ಕಳುಹಿಸುವ ಸಾಧ್ಯತೆ ಇರುವುದರಿಂದ ಅವುಗಳನ್ನು ಆಗಾಗ್ಗೆ ಪರೀಕ್ಷಿಸಿಕೊಳ್ಳಬೇಕು.

# ವಿಷಯ ಸೂಚಿ


| ಕ್ರ.ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 01 | 2025-26ನೇ ಸಾಲಿನ ಪ್ರವೇಶಾತಿಯ ತಾತ್ಕಾಲಿಕ ವೇಳಾಪಟ್ಟಿ | 01 |
| 02 | ಸಂಪರ್ಕಿಸಿಬೇಕಾದ ವಿವರಗಳು | 02 |
| 03 | ವಿಶ್ವವಿದ್ಯಾನಿಲಯ ಮತ್ತು ಪಶುಸಂಗೋಪನಾ ಪಾಲಿಟೆಕ್ನಿಕ್ಗಳ ಕಿರುಪರಿಚಯ (ಮುನ್ನುಡಿ) | 03-04 |
| 04 | ಶೈಕ್ಷಣಿಕ ಕಾರ್ಯಕ್ರಮಗಳು, ಪ್ರವೇಶಕ್ಕೆ ನಿಗದಿ ಪಡಿಸಿದ ಅಭ್ಯರ್ಥಿಗಳ ಸೀಟುಗಳು, ಪ್ರವೇಶಾತಿಗೆ ಅರ್ಹತೆ | 05 |
| 05 | ಅರ್ಜಿ ಸಲ್ಲಿಸುವ ವಿಧಾನ ಮತ್ತು ಅರ್ಜಿ ಶುಲ್ಕ ವಿವರ | 05 |
| 06 | ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕಾದ ಅಗತ್ಯ ಪ್ರಮಾಣ ಪತ್ರಗಳು/ದಾಖಲೆಗಳು | 06 |
| 07 | ಪ್ರವೇಶ ವಿಧಾನ ಮತ್ತು ಸೀಟುಗಳ ಮೀಸಲಾತಿ | 06-07 |
| 08 | ಅರ್ಜಿ ಭರ್ತಿ ಮಾಡುವಾಗ ಗಮನಿಸಬೇಕಾದ ಅಂಶಗಳು ಹಾಗೂ ಪ್ರವೇಶ (Admission) ವಿವರಗಳಿಗಾಗಿ ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು | 07-08 |
| 09 | ಸೀಟುಗಳ ಮೀಸಲಾತಿ / ಕಾನೂನು ಅಧಿಕಾರ ವ್ಯಾಪ್ತಿ | 09-12 |
| 10 | ಪ್ರವೇಶ ಶುಲ್ಕದ ವಿವರ /ನೋಂದಣಿ | 13 |
| 11 | ಶೆಡ್ಯೂಲ್-1 | 14 |
| 12 | ಪ್ರಮಾಣಪತ್ರ ಮತ್ತು ನಮೂನೆಗಳು | 15-19 |
| 13 | ರ್‍ಯಾಗಿಂಗ್ (Ragging) ಬಗ್ಗೆ ಎಚ್ಚರಿಕೆ | 20 |


**ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಕಿಂತ ಮಾಡುವ ಮೊದಲು ವಿವರಣಾ ಪುಸ್ತಕವನ್ನು (ಪ್ರಾಸ್ಪೆಕ್ಟಸ್) ಓದುವುದ**

## 2025-26ನೇ ಸಾಲಿನ ಪ್ರವೇಶಾತಿಯ ತಾತ್ಕಾಲಿಕ ವೇಳಾಪಟ್ಟಿ

<table>
<tr><th>ಪ್ರವೇಶ ಪ್ರಕ್ರಿಯೆಯ ವಿವರ</th><th colspan="2">ದಿನಾಂಕ</th></tr>
<tr><td>ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ</td><td colspan="2">01.07.2025</td></tr>
<tr><td>ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ</td><td colspan="2">31.07.2025 (23:59:59 ರವರೆಗೆ)</td></tr>
<tr><td rowspan="3">ಮೂಲ ದಾಖಲಾತಿ ಪರಿಶೀಲನೆ<br>ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳು:<br>1. ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ<br>2. ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು<br>3. ಪಶುವೈದ್ಯಕೀಯ ಮಹಾವಿದ್ಯಾಲಯ, ಹೊಂಬಾಳ ರಸ್ತೆ, ಗದಗ<br>4. ಪಶುವೈದ್ಯಕೀಯ ಮಹಾವಿದ್ಯಾಲಯ,ವಿನೋಬನಗರ, ಶಿವಮೊಗ್ಗ<br>5. ಪಶುವೈದ್ಯಕೀಯ ಮಹಾವಿದ್ಯಾಲಯ, ಗೋಕುಲ ಆವರಣ, ವಿದ್ಯಾನಗರ, ಹಾಸನ<br>ಸೂಚನೆಗಳು:<br>1. ದಾಖಲಾತಿ ಪರಿಶೀಲನೆಯ ಸಮಯ ಬೆಳಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯ ವರೆಗೆ ಮಾತ್ರ.<br>2. ಅಭ್ಯರ್ಥಿಗಳು/ಪೋಷಕರು ಖುದ್ದಾಗಿ ಮೂಲದಾಖಲಾತಿಗಳು, ಅರ್ಜಿಯ ಪ್ರತಿ ಹಾಗೂ ಇವುಗಳ ಎರಡು ಪ್ರತಿಗಳೊಂದಿಗೆ ಕಡ್ಡಾಯವಾಗಿ ತೆಗೆದುಕೊಂಡು ದಾಖಲಾತಿಗಳ ಪರಿಶೀಲನೆಯನ್ನು ಪೂರ್ಣಗೊಳಿಸುವುದು.</td><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 75% ಮೇಲ್ಪಟ್ಟ ಅಭ್ಯರ್ಥಿಗಳಿಗೆ</td><td>11.08.2025</td></tr>
<tr><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ರಿಂದ 75% ವರೆಗಿನ ಅಭ್ಯರ್ಥಿಗಳಿಗೆ</td><td>12.08.2025</td></tr>
<tr><td>ಎಸ್‌ಎಸ್‌ಎಲ್‌ಸಿ ಫಲಿತಾಂಶ 60% ಕ್ಕಿಂತ ಕೆಳಗಿನ ಅಭ್ಯರ್ಥಿಗಳಿಗೆ</td><td>13.08.2025</td></tr>
<tr><td>ವಿಶ್ವವಿದ್ಯಾಲಯದ (https://kvafsu.edu.in/admission.html) ಜಾಲತಾಣದಲ್ಲಿ ಅರ್ಹ / ಅನರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ</td><td colspan="2">22.08.2025<br>(ಮಧ್ಯಾಹ್ನ 1 ಗಂಟೆ ನಂತರ)</td></tr>
<tr><td>ಪ್ರಥಮ ಆಯ್ಕೆ ಪಟ್ಟಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಣೆ</td><td colspan="2">26.08.2025<br>(ಮಧ್ಯಾಹ್ನ 1 ಗಂಟೆ ನಂತರ)</td></tr>
<tr><td>ಪ್ರಥಮ ಆಯ್ಕೆಯ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲ ಮೂಲ ದಾಖಲಾತಿಗಳು ಸಲ್ಲಿಸುವುದು.</td><td colspan="2">28.08.2025 ರಿಂದ 30.08.2025</td></tr>
<tr><td>ಎರಡನೇ ಆಯ್ಕೆ ಪಟ್ಟಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಣೆ</td><td colspan="2">06.09.2025</td></tr>
<tr><td>ಎರಡನೇ ಆಯ್ಕೆಯ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲ ಮೂಲ ದಾಖಲಾತಿಗಳು / ಪ್ರಮಾಣ ಪತ್ರಗಳು ಸಲ್ಲಿಸುವುದು</td><td colspan="2">08.09.2025 ರಿಂದ 10.09.2025</td></tr>
<tr><td>ಶೈಕ್ಷಣಿಕ ವರ್ಷದ ಆರಂಭ</td><td colspan="2">15.09.2025</td></tr>
</table>

**ವಿಶೇಷ ಸೂಚನೆ:**

1. **ಅಂತಿಮ ಸುತ್ತಿನ ಸೀಟು ಹಂಚಿಕೆ ಪೂರ್ಣಗೊಳ್ಳುವರೆಗೂ ಅಭ್ಯರ್ಥಿಗಳು ಇತ್ತೀಚಿನ ಮಾಹಿತಿ/ವಿಷಯಗಳಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ www.kvafsu.edu.inನೊಂದಿಗೆ ಸದಾ ಸಂಪರ್ಕದಲ್ಲಿರಬೇಕು.**
2. **ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ ಯುವ ಜನತೆಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಸತತವಾಗಿ ಪಶುಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಪಶು ಸಂಬಂಧಿತ ಉತ್ಪಾದನೆಯನ್ನು ಹೆಚ್ಚಿಸುವ ಕುರಿತು ಜ್ಞಾನವನ್ನು ಪಡೆಯುವಲ್ಲಿ ನೆರವಾಗುತ್ತದೆ. ಹಾಗೂ ಐವಿಸಿ ಕಾಯಿದೆ, 1984ರ ಸೆಕ್ಷನ್ 30 (ಬಿ) ಅಡಿಯಲ್ಲಿ ಕರ್ನಾಟಕ ಸರ್ಕಾರವು ವ್ಯಾಖ್ಯಾನಿಸಿದಂತೆ ನೋಂದಾಯಿತ ಪಶುವೈದ್ಯಕೀಯ ವೈದ್ಯರ ಮೇಲ್ವಿಚಾರಣೆ ಮತ್ತು ನಿರ್ದೇಶನದ ಅಡಿಯಲ್ಲಿ "ಅಪ್ರಧಾನ ಪಶುವೈದ್ಯಕೀಯ ಸೇವೆಗಳಿಗೆ" ಸೀಮಿತವಾದ ಸೇವೆಗಳನ್ನು ನಿರ್ವಹಿಸಲು ಮಾತ್ರ ಅರ್ಹರಾಗಿರುತ್ತಾರೆ. ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸರ್ಕಾರದ ವತಿಯಿಂದ ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ್ನು ಮುಗಿಸಿದ ಅಭ್ಯರ್ಥಿಗಳಿಗೆ ಯಾವುದೇ ಖಚಿತ ಸರ್ಕಾರಿ ಉದ್ಯೋಗದ ಕುರಿತು ಭರವಸೆ ಇರುವುದಿಲ್ಲ.**

## ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
## ಕುಲಸಚಿವರು
## ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
## ನಂದಿನಗರ,ಬೀದರ-585 226 ಕರ್ನಾಟಕ, ಭಾರತ

| | |
|---|---|
| ದೂರವಾಣಿ: 08482-245241/245360 | ದೂರವಾಣಿ:+91 9449661149 |
| ಇಮೇಲ್:regkvafsu@gmail.com | ವೆಬ್‌ಸೈಟ್:www.kvafsu.edu.in |
| **ವಿಶ್ವವಿದ್ಯಾಲಯದ ಕಛೇರಿ ಸಮಯ:** ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9.30 ರಿಂದ ಸಂಜೆ 5.00 ಗಂಟೆ ಶನಿವಾರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 01.30 ಗಂಟೆಯವರೆಗೆ ಸರ್ಕಾರಿ ರಜಾದಿನಗಳಂದು ಕಛೇರಿಯು ತೆರೆದಿರುವುದಿಲ್ಲ. | |

| ಕಾಲೇಜು ಮತ್ತು ವಿಳಾಸ | ದೂರವಾಣಿ | ಇ-ಮೇಲ್ |
|---|---|---|
| ಪ್ರಾಂಶುಪಾಲರು<br>ಪಶುಸಂಗೋಪನಾ ಪಾಲಿಟೆಕ್ನಿಕ್,<br>ಕೊನೆಹಳ್ಳಿ, ತಿಪಟೂರ ತಾಲ್ಲೂಕು,<br>ತುಮಕೂರು ಜಿಲ್ಲೆ | +91 8310630380 | ahpkonehally@gmail.com |
| ಪ್ರಾಂಶುಪಾಲರು<br>ಪಶುಸಂಗೋಪನಾ ಪಾಲಿಟೆಕ್ನಿಕ್,<br>ಕುನ್ನೂರು, ಶಿಗ್ಗಾಂವ, ತಾಲ್ಲೂಕು,<br>ಹಾವೇರಿ ಜಿಲ್ಲೆ | +91 9483844340 | ahpshiggaon@gmail.com |
| ಪ್ರಾಂಶುಪಾಲರು<br>ಪಶುಸಂಗೋಪನಾ ಪಾಲಿಟೆಕ್ನಿಕ್,<br>ಕೊರವಂಗಲ ಕ್ರಾಸ್, ಹಾಸನ ಜಿಲ್ಲೆ | +91 9900796095 | ahpkoravangala@gmail.com |
| ಪ್ರಾಂಶುಪಾಲರು<br>ಪಶುಸಂಗೋಪನಾ ಪಾಲಿಟೆಕ್ನಿಕ್,<br>ಬರ್ಗಿ, ಗುಂಡ್ಲುಪೇಟೆ ತಾಲ್ಲೂಕು,<br>ಚಾಮರಾಜನಗರ ಜಿಲ್ಲೆ | +91 9916588675 | ahpbargi@gmail.com |
| ಪ್ರಾಂಶುಪಾಲರು<br>ಪಶುಸಂಗೋಪನಾ ಪಾಲಿಟೆಕ್ನಿಕ್,<br>ಡೋರ್ನಳ್ಳಿ, ಶಾಹಪೂರ<br>ತಾಲ್ಲೂಕು, ಯಾದಗಿರ ಜಿಲ್ಲೆ | +91 8197734057 | ahpdornalli@kvafsu.edu.in |

# ಮುನ್ನುಡಿ

ಪಶುಪಾಲನೆ, ಹೈನುಗಾರಿಕೆ ಮತ್ತು ಮೀನು ಸಾಕಾಣಿಕೆಯಂತಹ ರೈತೋದ್ಯಮಗಳ ಪ್ರಧಾನ ಅಭಿವೃದ್ಧಿಗಾಗಿ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಫೆಬ್ರವರಿ 23, 2004ರಲ್ಲಿ ಪ್ರಕಟಗೊಂಡ ಕರ್ನಾಟಕ ಕಾಯ್ದೆ ಸಂಖ್ಯೆ 9, 2004 ರಂತೆ ಸ್ಥಾಪಿಸಲಾಗಿದೆ. ವಿಶ್ವವಿದ್ಯಾಲಯವು ಏಪ್ರಿಲ್ 1, 2005 ರಿಂದ "ಗ್ರಾಮೀಣಾಭಿವೃದ್ಧಿ ಮತ್ತು ರೈತ ಸ್ನೇಹಿ" ಎಂಬ ಧ್ಯೇಯದೊಂದಿಗೆ ಕಾರ್ಯಾರಂಭ ಮಾಡಿದೆ. ಕರ್ನಾಟಕದಲ್ಲಿನ ಪಶುವೈದ್ಯಕೀಯ, ಪಶುವಿಜ್ಞಾನ, ಹೈನುಗಾರಿಕೆ ಮತ್ತು ಮತ್ಸ್ಯ ವಿಜ್ಞಾನಗಳಲ್ಲಿನ ಶಿಕ್ಷಣ, ಕಲಿಕೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿಯ ಧ್ಯೇಯವನ್ನೊಳಗೊಂಡ ತಂತ್ರಜ್ಞಾನಗಳನ್ನು ಹಳ್ಳಿಗಳಿಗೆ ವರ್ಗಾಯಿಸುವ ಜವಾಬ್ದಾರಿಯೊಂದಿಗೆ ಸ್ಥಾಪಿಸಲಾಗಿದೆ.

ರೈತಾಪಿ ಜನರ ಅಭ್ಯುದಯವೇ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶವೆಂಬುದನ್ನು ಸಾರಿ ಹೇಳುವ 'ಗ್ರಾಮ್ಯಮುಖಿ – ರೈತಸ್ನೇಹಿ' ಎಂಬ ಧ್ಯೇಯವಾಕ್ಯವನ್ನು ವಿಶ್ವವಿದ್ಯಾಲಯವು ಹೊಂದಿದೆ.

ಕಪಪಮೀವಿವಿ ಒಂದು ಸ್ವಾಯತ್ತ ಶಿಕ್ಷಣ ಸಂಸ್ಥೆಯಾ . ವಿಶ್ವವಿದ್ಯಾಲಯವು ಬೆಂಗಳೂರು, ಬೀದರ, ಶಿವಮೊಗ್ಗ,ಹಾಸನ,ಗದಗ ಮತ್ತು ಅಥಣಿ ಆರು ಪಶುವೈದ್ಯಕೀಯ ಮಹಾವಿದ್ಯಾಲಯಗಳು, ಬೆಂಗಳೂರು ಮತ್ತು ಕಲಬುರಗಿಯಲ್ಲಿ ಎರಡು ಹೈನು ವಿಜ್ಞಾನ ಮಹಾವಿದ್ಯಾಲಯಗಳು ಮತ್ತು ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯವು ಮೀನುಗಾರಿಕೆ ಶಿಕ್ಷಣವನ್ನು ಬಲಪಡಿಸವಲ್ಲಿ ಸೇವೆಯನ್ನು ನೀಡುತ್ತಿವೆ. ವಿಶ್ವವಿದ್ಯಾಲಯವು ಪಶುವೈದ್ಯಕೀಯ ಮತ್ತು ಪಶು ವಿಜ್ಞಾನಗಳಲ್ಲಿ, ಮೀನುಗಾರಿಕೆ ವಿಜ್ಞಾನ ಮತ್ತು ಹೈನು ವಿಜ್ಞಾನಗಳಲ್ಲಿ ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳನ್ನು ನೀಡುತ್ತಿದೆ.
ಕರ್ನಾಟಕ ಸರ್ಕಾರದಿಂದ ರೂಪುಗೊಂಡ ಕಾಯ್ದೆ ಮತ್ತು ನಿಯಮಗಳ ಅನ್ವಯ ಕಾರ್ಯನಿರ್ವಹಿಸುವ ವ್ಯವಸ್ಥಾಪನಾ ಮಂಡಳಿಯಿದೆ. ವಿಶ್ವವಿದ್ಯಾಲಯವು ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸಲು ಹಣಕಾಸು ಸಮಿತಿಯ ಸಹಕಾರವನ್ನು ಪಡೆದಿರುತ್ತದೆ. ಶೈಕ್ಷಣಿಕ ವಿಷಯಗಳ ಮೇಲ್ವಿಚಾರಣೆ ಮಾಡಲು ವಿವಿಧ ನಿಕಾಯಗಳ ಅಧ್ಯಯನ ಮಂಡಳಿ ಮತ್ತು ವಿದ್ಯಾ ವಿಷಯಕ ಪರಿಷತ್ತನ್ನು ಒಳಗೊಂಡಿರುತ್ತದೆ. ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಉಸ್ತುವಾರಿಗಾಗಿ ಕ್ರಮವಾಗಿ ಸಂಶೋಧನಾ ಪರಿಷತ್ತು ಮತ್ತು ವಿಸ್ತರಣಾ ಶಿಕ್ಷಣ ಪರಿಷತ್ತುಗಳಿವೆ.

## ಡಿಪ್ಲೊಮಾ ((ಪಶುಸಂಗೋಪನೆ)

ಪಶುಸಂಗೋಪನೆಗೆ ಸಂಬಂಧಿಸಿದ ಉದ್ಯಮಶೀಲ ಚಟುವಟಿಕೆಗಳನ್ನು ಉತ್ತೇಜಿಸಲು ಹಾಗೂ ಯುವ ರೈತಾಪಿ ಸಮುದಾಯವನ್ನು ಪಶುಸಂಗೋಪನೆ ಕಡೆ ಒಲವು ಮೂಡುವಂತೆ ಮಾಡುವುದರ ಸಲುವಾಗಿ ಕರ್ನಾಟಕ ಘನ ಸರ್ಕಾರವು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಕಾಯಿದೆ 2004ರ (ಕರ್ನಾಟಕ ಕಾಯಿದೆ ನಂ 9,2004) ಪರಿಚ್ಛೇದ 5 ಅ, ಡಿ. ಮತ್ತು ಪರಿಚ್ಛೇದ 6ಸಿ, ಡಿ ರಲ್ಲಿ ನಿಗದಿಪಡಿಸಿದ ಅಧಿಕಾರದನ್ವಯ ಸರ್ಕಾರಿ ಆದೇಶ (ಸರ್ಕಾರಿ ಆದೇಶ ಸಂಖ್ಯೆ:ಪಸಂಮೀ 116 ಪಸಸೇ 2011 ದಿನಾಂಕ 14-10-2011)ರಂತೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,ಬೀದರರ ಅಡಿಯಲ್ಲಿ 2011-12ನೇ ಶೈಕ್ಷಣಿಕ ವರ್ಷದಿಂದ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ಗ್ರಾಮೀಣ ಅಭ್ಯರ್ಥಿಗಳಿಗೆ ಸೀಮಿತವಾಗಿ ಪಶುಸಂಗೋಪನೆಯಲ್ಲಿ 2 ವರ್ಷದ ಡಿಪ್ಲೊಮಾ ಪ್ರಾರಂಭಿಸಲು ಆದೇಶಿಸಲಾಯಿತು. ಈಗ ರಾಜ್ಯಾದ್ಯಂತ ಐದು ಪಶುಸಂಗೋಪನೆ ಪಾಲಿಟೆಕ್ನಿಕ್ ಗಳು ಕಾರ್ಯನಿರ್ವಹಿಸುತ್ತಿವೆ.

### 1. ಪಶುಸಂಗೋಪನಾ ಪಾಲಿಟೆಕ್ನಿಕ್, ಕೊನೆಹಳ್ಳಿ, ತಿಪಟೂರ ತಾಲ್ಲೂಕು, ತುಮಕೂರು ಜಿಲ್ಲೆ.

ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ (ಅಮೃತ್ ಮಹಲ್), ಕೊನೇಹಳ್ಳಿ, ತಿಪಟೂರು ಇಲ್ಲಿನ ಆವರಣದಲ್ಲಿ 2011-12ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂ: ಪಸಂಮೀ 116 ಪಸಸೇ 2011 ರನ್ವಯ ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜನ್ನು ಆರಂಭಿಸಲಾಯಿತು. ಹತ್ತನೇ ತರಗತಿ ತೇರ್ಗಡೆ ಹೊಂದಿದ ಹಾಗೂ ಕಡ್ಡಾಯವಾಗಿ ಗ್ರಾಮೀಣ ಪ್ರದೇಶದಲ್ಲೇ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಪಶುಸಂಗೋಪನೆ ವಿಷಯದಲ್ಲಿ ಡಿಪ್ಲೊಮಾ ವ್ಯಾಸಂಗವನ್ನು ನೀಡಲಾಗುತ್ತಿದೆ. ಗ್ರಾಮೀಣ ಯುವಕರಿಗೆ ಸ್ವ-ಉದ್ಯೋಗ ಮತ್ತು ಉದ್ಯಮಶೀಲತಾ ಅನುಭವವನ್ನು ನೀಡುವ ಸದುದ್ದೇಶದಿಂದ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಹೈನು, ಕುಕ್ಕುಟ ಮತ್ತು ಹಂದಿ ಸಾಕಾಣಿಕೆ ಕ್ಷೇತ್ರಗಳಲ್ಲಿ ಉದ್ಯೋಗಿಗಳಾಗಿದ್ದಾರೆ. ಕೆಲವರು ಉದ್ಯಮಶೀಲರಾಗಿ ಯಶಸ್ವಿಯಾಗಿದ್ದಾರೆ.

## 2. ಪಶುಸಂಗೋಪನಾ ಪಾಲಿಟೆಕ್ನಿಕ್, ಕುನ್ನೂರು, ಶಿಗ್ಗಾಂವ, ತಾಲ್ಲೂಕು, ಹಾವೇರಿ ಜಿಲ್ಲೆ

ಪಶುಸಂಗೋಪನಾ ಪಾಲಿಟೆಕ್ನಿಕ್, ಕುನ್ನೂರು, ಶಿಗ್ಗಾಂವ ದಿನಾಂಕ 03.09.2012 ರಲ್ಲಿ ಶಿಗ್ಗಾಂವಿಯಲ್ಲಿ ಹಳೇ ಕೋರ್ಟ್ ಆವರಣದ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿತು. ದಿನಾಂಕ 22.03.2018 ರಂದು ಕುನ್ನೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸ್ಥಳಾಂತರಗೊಂಡಿದೆ. ಹತ್ತನೇ ತರಗತಿ ಪೂರ್ಣಗೊಳಿಸಿದ ಗ್ರಾಮೀಣ ವಿದ್ಯಾರ್ಥಿಗಳಿಗೆ ಎರಡು ವರ್ಷಗಳ (ನಾಲ್ಕು ಸೆಮಿಸ್ಟರ್) 'ಪಶು ಸಂಗೋಪನಾ ಡಿಪ್ಲೊಮಾ'ಕ್ಕಾಗಿ ಬೋಧನೆ ಹಾಗೂ ತರಬೇತಿಯನ್ನು ನೀಡಲಾಗುತ್ತಿದೆ. ಬೋಧನಾ ಮಾಧ್ಯಮವು ಕನ್ನಡವಾಗಿದ್ದು ಇದೊಂದು ಸ್ವಯಂ ಉದ್ಯೋಗಕ್ಕಾಗಿ ಸರ್ಕಾರದಿಂದ ತೆರೆಯಲ್ಪಟ್ಟ ಸಂಸ್ಥೆಯಾಗಿದೆ. ಸುಮಾರು 25 ಎಕರೆ ಪ್ರದೇಶದಲ್ಲಿ ಹೈನುರಾಸು, ಆಡು ಮತ್ತು ಕುರಿ ಘಟಕಗಳಿವೆ. ಮುಧೋಳ ತಳಿಯ ಶ್ವಾನಗಳನ್ನು ಸಹ ಸಾಕಲಾಗುತ್ತಿದೆ. ಒಂದು ಎಕರೆ ವಿಸ್ತೀರ್ಣದಲ್ಲಿ ವಿವಿಧ ಮೇವಿನ ತಳಿಗಳ ಪ್ರಾತ್ಯಕ್ಷಿಕೆಯ ಘಟಕವಿದೆ. ಪಶುಸಂಗೋಪನೆಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಅಗತ್ಯವಾದ ವಿವಿಧ ಪ್ರಾಣಿಗಳ ಸಾಕಾಣಿಕೆ ಹಾಗೂ ಮೇವಿನ ಉತ್ಪಾದನೆಯಲ್ಲಿ ವಿದ್ಯಾರ್ಥಿಗಳು ಅನುಭವವನ್ನು ಪಡೆದುಕೊಳ್ಳುತ್ತಿದ್ದಾರೆ. ಇಲ್ಲಿರುವ ರೈತ ತರಬೇತಿ ಕೇಂದ್ರದಿಂದ 500ಕ್ಕೂ ಹೆಚ್ಚು ರೈತರು ತರಬೇತಿ ಪಡೆದಿರುತ್ತಾರೆ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ನಿಲಯಗಳಿವೆ.

## 3. ಪಶುಸಂಗೋಪನಾ ಪಾಲಿಟೆಕ್ನಿಕ್, ದೋರನಹಳ್ಳಿ, ಶಾಹಾಪುರ ತಾಲ್ಲೂಕು, ಯಾದಗಿರ ಜಿಲ್ಲೆ

ದೋರನಹಳ್ಳಿಯ ಪಶುಸಂಗೋಪನಾ ಪಾಲಿಟೆಕ್ನಿಕ್ ಸಂಸ್ಥೆಯು ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿದೆ. ಈ ಸಂಸ್ಥೆಯು 2017-18 ರಿಂದ ಕಾರ್ಯನಿರ್ವಹಿಸುತ್ತಿದೆ. ಯಾದಗಿರಿ-ಶಹಾಪುರ ರಾಜ್ಯ ಹೆದ್ದಾರಿಗೆ ಹತ್ತಿರದಲ್ಲಿದೆ. ಎರಡು ವರ್ಷಗಳ (ನಾಲ್ಕು ಸೆಮಿಸ್ಟರ್) 'ಪಶು ಸಂಗೋಪನಾ ಡಿಪ್ಲೊಮಾ' ಪ್ರಮಾಣ ಪತ್ರವನ್ನು ಪಡೆಯಲು ಪ್ರತಿ ವರ್ಷ ಈ ಸಂಸ್ಥೆಗೆ ಹತ್ತನೇ ತರಗತಿ ಪೂರ್ಣಗೊಳಿಸಿದ ಸುಮಾರು 50 ಗ್ರಾಮೀಣ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಾರೆ. ರೈತರಿಗಾಗಿ ಮೇವು ಉತ್ಪಾದನೆ, ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮತ್ತಿತರ ತರಬೇತಿ ನೀಡಲಾಗುತ್ತಿ_ದೆ.

## 4. ಪಶುಸಂಗೋಪನಾ ಪಾಲಿಟೆಕ್ನಿಕ್, ಕೊರವಂಗಲ ಕ್ರಾಸ್, ಹಾಸನ ಜಿಲ್ಲೆ

ಸರ್ಕಾರದ ಆದೇಶ ಸಂ: ಪಸಂಮೀ 78 ಪಸಸೇ 2017, ಬೆಂಗಳೂರು, ದಿನಾಂಕ: 16.05.2017 ರನ್ವಯ ಈ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಹತ್ತನೇ ತರಗತಿ ಪೂರ್ಣಗೊಳಿಸಿದ ಗ್ರಾಮೀಣ ವಿದ್ಯಾರ್ಥಿಗಳಿಗೆ ಎರಡು ವರ್ಷಗಳ (ನಾಲ್ಕು ಸೆಮಿಸ್ಟರ್) 'ಪಶು ಸಂಗೋಪನಾ ಡಿಪ್ಲೊಮಾ' ಪ್ರಮಾಣ ಪತ್ರವನ್ನು ನೀಡುತ್ತಿದೆ.

## 5.ಪಶುಸಂಗೋಪನಾ ಪಾಲಿಟೆಕ್ನಿಕ್, ಬರ್ಗಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ

ಬರಗಿ ಪಶುಸಂಗೋಪನಾ ಪಾಲಿಟೆಕ್ನಿಕ್ ಸಂಸ್ಥೆಯನ್ನು 09.10.2017ರಂದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಶ್ವವಿದ್ಯಾಲಯ, ಬೀದರ, ಇದರ ಅಂಗಸಂಸ್ಥೆಯಾಗಿ ಪ್ರಾರಂಭವಾಯಿತು. ಈ ಸಂಸ್ಥೆಯು ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಕಡಸು ಉತ್ಪಾದನೆ ಮತ್ತು ತರಬೇತಿ ಕೇಂದ್ರ, ಬರಗಿ, ಗುಂಡ್ಲುಪೇಟೆ ತಾಲ್ಲೂಕು ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ ವರ್ಷ ಹತ್ತನೇ ತರಗತಿ ಪೂರ್ಣಗೊಳಿಸಿದ 50 ಗ್ರಾಮೀಣ ವಿದ್ಯಾರ್ಥಿಗಳು ಇಲ್ಲಿ ಪ್ರವೇಶ ಪಡೆಯುತ್ತಾರೆ. ಕಾಲೇಜಿನಲ್ಲಿ ಮೂರು ಬೋಧಕ ಮತ್ತು ಹದಿನಾರು ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಪಶುಸಂಗೋಪನಾ ಪಾಲಿಟೆಕ್ನಿಕ್‌ನಲ್ಲಿ ಜಾನಾವಾರು ಸಾಕಾಣಿಕೆ, ಕೃಷಿ ಚಟುವಟಿಕೆ ಜೊತೆಗೆ ರೈತರಿಗೆ ಹಸು ಸಾಕಾಣಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ರಸಮೇವು ತಯಾರಿಕೆ ಮತ್ತು ಮೇವು ಪೌಷ್ಟೀಕರಣದ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ.

# ಡಿಪ್ಲೊಮಾ (ಪಶು ಸಂಗೋಪನೆ) 2025-26

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರದಲ್ಲಿ ಡಿಪ್ಲೊಮಾ (ಪಶು ಸಂಗೋಪನೆ) ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೆ ಅವಶ್ಯಕ ವಿವರಣೆಯ ಮಾಹಿತಿಯನ್ನು ಈ ಪುಸ್ತಕವು ಒದಗಿಸುತ್ತದೆ

**ಬೋಧನಾ ಮಾಧ್ಯಮ:** ಪಠ್ಯಕ್ರಮವನ್ನು ಕನ್ನಡ ಮಾಧ್ಯಮದಲ್ಲಿ ಬೋಧಿಸಲಾಗುತ್ತದೆ.

**ಅವಧಿ:** 02 ವರ್ಷಗಳ (ನಾಲ್ಕು ಸೆಮಿಸ್ಟರ್‌ಗಳು) ಅವಧಿಯದ್ದಾಗಿರುತ್ತದೆ.

ಡಿಪ್ಲೊಮಾ (ಪಶು ಸಂಗೋಪನೆ) ಕೋರ್ಸ್ನ ಸ್ಥಳ ಮತ್ತು ಪ್ರವೇಶಕ್ಕೆ ನಿಗದಿ ಪಡಿಸಿದ ಅಭ್ಯರ್ಥಿಗಳ ಸೀಟುಗಳು

| **ಕ್ರ.ಸಂ** | **ಪಾಲಿಟೆಕ್ನಿಕ್** | **ಸೀಟುಗಳು** | | | | | |
|---|---|---|---|---|---|---|---|
| | | **ವಿಶೇಷ ವರ್ಗ** | **ಕಲ್ಯಾಣ ಕರ್ನಾಟಕ** | | **ಉಳಿದ ವರ್ಗ** | | **ಒಟ್ಟು** |
| | | | **ಸಾಮಾನ್ಯ ವರ್ಗ** | **ಕೃಷಿ ಕೋಟಾ** | **ಸಾಮಾನ್ಯ ವರ್ಗ** | **ಕೃಷಿ ಕೋಟಾ** | |
| 1 | ಪಶುಸಂಗೋಪನಾ ಪಾಲಿಟೆಕ್ನಿಕ್, ಕೊನೆಹಳ್ಳಿ. | 07 | 02 | 02 | 20 | 19 | 50 |
| 2 | ಪಶುಸಂಗೋಪನಾ ಪಾಲಿಟೆಕ್ನಿಕ್, ಕುನ್ನೂರು, ಶಿಗ್ಗಾಂವ. | 07 | 02 | 02 | 19 | 20 | 50 |
| 3 | ಪಶುಸಂಗೋಪನಾ ಪಾಲಿಟೆಕ್ನಿಕ್, ಕೊರವಂಗಲ ಕ್ರಾಸ್, ಹಾಸನ ಜಿಲ್ಲೆ | 07 | 02 | 02 | 19 | 20 | 50 |
| 4 | ಪಶುಸಂಗೋಪನಾ ಪಾಲಿಟೆಕ್ನಿಕ್, ಬರ್ಗಿ, | 07 | 02 | 02 | 20 | 19 | 50 |
| 5 | ಪಶುಸಂಗೋಪನಾ ಪಾಲಿಟೆಕ್ನಿಕ್, ಡೋರ್ನಳ್ಳಿ, | 07 | 15 | 15 | 07 | 06 | 50 |

**<u>ಪ್ರವೇಶಾತಿಗೆ ವಿದ್ಯಾರ್ಹತೆ:</u>** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ/ ತತ್ಸಮಾನ ಪರೀಕ್ಷೆಯೊಂದಿಗೆ ಕನ್ನಡ ಒಂದು ವಿಷಯವನ್ನು ಕಡ್ಡಾಯವಾಗಿ ಓದಿ ಕನಿಷ್ಠ ಶೇ. 45 ರಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗಿರಬೇಕು (ಪ.ಜಾತಿ/ಪ.ಪಂಗಡ/ಪ್ರವರ್ಗ-1ರ ಅಭ್ಯರ್ಥಿಗಳು ಶೇ.40 ರಷ್ಟು ಅಂಕಗಳನ್ನು ಪಡೆದು ತೇರ್ಗಡೆ-ಯಾಗಿರಬೇಕು) ಮತ್ತು ಕಡ್ಡಾಯವಾಗಿ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.

**<u>ವಯೋಮಿತಿ:</u>** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ 31.07.2025 ರಂದು ಅಭ್ಯರ್ಥಿಯ ವಯಸ್ಸು 20 ವರ್ಷ ಮೀರಿರಬಾರದು.

**ಅರ್ಜಿ ಸಲ್ಲಿಸುವ ವಿಧಾನ ಮತ್ತು ಅರ್ಜಿ ಶುಲ್ಕ ವಿವರ:**

1. ಅರ್ಜಿಯನ್ನು ಆನ್‌ಲೈನ್ ಮುಖಾಂತರ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಭರ್ತಿಮಾಡುವುದು. ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿಮಾಡುವ ದಿನಾಂಕ 01.07.2025 ರಿಂದ ಪ್ರಾರಂಭವಾಗುವುದು ಹಾಗೂ ಕೊನೆಯ ದಿನಾಂಕ: 31.07.2025. ಇತರೇ ಮೂಲಗಳಿಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೆ ಸ್ವೀಕರಿಸಲಾಗುವುದಿಲ್ಲ.
2. ಅರ್ಜಿಯ ಶುಲ್ಕವು ಆನ್‌ಲೈನ್ ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಮುಖಾಂತರವೇ ಪಾವತಿಸುವುದು. ಇತರೇ ಯಾವುದೇ ಮೂಲಗಳಿಂದ ಅರ್ಜಿಯ ಶುಲ್ಕವನ್ನು ಸ್ವೀಕರಿಸಲಾಗುವುದಿಲ್ಲ.

**ಅರ್ಜಿ ಶುಲ್ಕ ವಿವರ**

| **ಸಾಮಾನ್ಯ ವರ್ಗ (ಸಾಮಾನ್ಯ/2ಎ/2ಬಿ/3ಎ/3ಬಿ)** | **ಪ.ಜಾ/ಪ.ಪ./ಪ್ರವರ್ಗ-1 ಅಭ್ಯರ್ಥಿಗಳಿಗೆ** |
|---|---|
| ರೂ.700/- | ರೂ.350/- |

3. ಅರ್ಜಿಯ ಜೊತೆಗೆ ನೀಡಲಾಗಿರುವ ವಿವರಣಾ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು, ಅಭ್ಯರ್ಥಿಯು ವಿವರಣಾ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಂಡು ಅದನ್ನು ವಿವರವಾಗಿ ಓದಿದ ನಂತರ ಅರ್ಜಿಯನ್ನು ವಿವರಣ ಪುಸ್ತಕದಲ್ಲಿ ಸೂಚಿಸಿದಂತೆ ಭರ್ತಿ ಮಾಡಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಮಾತ್ರ ಸಲ್ಲಿಸಬೇಕು.

**ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಅಪ್‌ಲೋಡ್ ಮಾಡಬೇಕಾದ ಅಗತ್ಯ ಪ್ರಮಾಣ ಪತ್ರಗಳು:**

1. ಎಸ್.ಎಸ್.ಎಲ್.ಸಿ, ಅಂಕ ಪಟ್ಟಿ (ಕಂಪ್ಯೂಟರ್ ಪ್ರಿಂಟ್ ಇದ್ದಲ್ಲಿ ಮುಖ್ಯ ಗುರುಗಳ ಸಹಿ ಹಾಗೂ ಮೊಹರು ಹೊಂದಿರಬೇಕು).

2. 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿದ "ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ" , (ನಿಗದಿತ ದಿನಾಂಕದ ಒಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಹಿ ಹಾಗೂ ಮೊಹರ ಹೊಂದಿರಬೇಕು).

3. ಮೀಸಲಾತಿ (ಪ.ಜಾ/ಪ.ಪ/ಪ್ರವರ್ಗ-1/ಒ.ಬಿ.ಸಿ) ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ.

4. ಅನುಚ್ಛೇದ 371(ಜೆ) ರಂತೆ ಕಲ್ಯಾಣ–ಕರ್ನಾಟಕ ಪ್ರದೇಶಕ್ಕೆ ಸೇರಿದ ಅಭ್ಯರ್ಥಿಗಳಾಗಿದ್ದರೆ ಸೂಕ್ತವಾದ ಪ್ರಮಾಣ ಪತ್ರ. (ಪ್ರಮಾಣ ಪತ್ರವನ್ನು ಸಹಾಯಕ ಆಯುಕ್ತರವರಿಂದ ಪಡೆಯತಕ್ಕದ್ದು).

5. ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50% ರಷ್ಟು ಸೀಟುಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ ಪ್ರವೇಶಾತಿಗೆ ಮೀಸಲಿಡಲಾಗಿದೆ. ಅಭ್ಯರ್ಥಿಗಳು ಈ ಕೋಟಾದಡಿ ಪ್ರವೇಶ ಬಯಸಿದ್ದಲ್ಲಿ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಲಗತ್ತಿಸಬೇಕು (ನಮೂನೆಗಳನ್ನು ಲಗತ್ತಿಸಲಾಗಿದೆ).

   I. ವ್ಯವಸಾಯಗಾರರ ಪ್ರಮಾಣ ಪತ್ರ / ಕೃಷಿ ಮತ್ತು ಕೃಷಿ ಸಂಬಂಧಿತ ಕೂಲಿ ಕಾರ್ಮಿಕರ ಪ್ರಮಾಣ ಪತ್ರ - RD ಸಂಖ್ಯೆಯೊಂದಿಗೆ ಕಂದಾಯ ಇಲಾಖೆಯಲ್ಲಿ ಕೊಡುವ ಪ್ರಮಾಣ ಪತ್ರ.
   II. ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕೃಷಿಕರ ಕೋಟಾದಡಿಯಲ್ಲಿ ಅರ್ಜಿಯನ್ನು ಪರಿಗಣಿಸಲು ಕಡ್ಡಾಯವಾಗಿ ಲಗತ್ತಿಸುವುದು RD ಸಂಖ್ಯೆ ಮತ್ತು QR ಕೋಡ್‌ನೊಂದಿಗೆ ತಹಶೀಲ್ದಾರ್ ರವರು ಕೊಡುವ ಪ್ರಮಾಣ ಪತ್ರ.

6. ಎನ್.ಸಿ.ಸಿ./ಕ್ರೀಡಾ/ಸ್ಕೌಟ್ಸ್ ಮತ್ತು ಗೈಡ್ಸ್ / ವಿಶೇಷ ಚೇತನರು/ ಯೋಧರು/ಮಾಜಿ ಯೋಧರು /ಆಂಗ್ಲೋ ಇಂಡಿಯನ್ ಮತ್ತು ಗಡಿನಾಡು ಕನ್ನಡಿಗರು/ಹೊರನಾಡು ಕನ್ನಡಿಗರು / ಸಿ.ಎ.ಪಿ.ಎಫ್ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಈ ಕೋಟಾದಡಿ ಪ್ರವೇಶ ಬಯಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿ/ಪ್ರಾಧಿಕಾರಗಳಿಂದ ಪಡೆದ ಪ್ರಮಾಣ ಪತ್ರ.

7. ಆವರ್ತಿತ (ಮರುಕಳಿಸುವ) ರೋಗದಿಂದ ಬಳಲುತ್ತಿರುವ, ಪ್ರವೇಶಕ್ಕೆ ಆಯ್ಕೆಯಾಗಿರುವ ಅಭ್ಯರ್ಥಿಯು ಮಹಾವಿದ್ಯಾಲಯದಲ್ಲಿ ನೋಂದಣಿ ಸಮಯದಲ್ಲಿ ಪರಿಣಿತ ವೈದ್ಯರಿಂದ ಪ್ರಮಾಣಪತ್ರವನ್ನು ಸಲ್ಲಿಸಬೇಕಾಗುತ್ತದೆ.

**ವಿಶೇಷ ಸೂಚನೆ:** ಮೀಸಲಾತಿಯನ್ನು ಕೋರಿ ಸಲ್ಲಿಸುವ ಎಲ್ಲಾ ಪ್ರಮಾಣಪತ್ರಗಳು, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಅಂದರೆ ದಿನಾಂಕ: 31.07.2025 ಅಥವಾ ಅದರ ಹಿಂದಿನ ದಿನಾಂಕಗಳಲ್ಲಿ ಪಡೆದಿರಬೇಕು.

## ಪ್ರವೇಶ ವಿಧಾನ ಮತ್ತು ಸೀಟುಗಳ ಮೀಸಲಾತಿ

- ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇರೆಗೆ ಸರಕಾರದ ಮೀಸಲಾತಿ ಆದೇಶದಂತೆ ಹಾಗೂ ಮೆರಿಟ್ ಆಧರಿಸಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು.
- ಅಭ್ಯರ್ಥಿಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗಳಿಗೆ ಆಯ್ಕೆ ಮಾಡುವಾಗ ಈ ಕೆಳಗಿನಂತೆ ಮೀಸಲಾತಿ ಅನುಸರಿಸಲಾಗುವುದು.
  - ಅ) ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಸರಕಾರದ ಆದೇಶ ನಂ.ಎಸ್‌ಡಬ್ಲೂಎಲ್/251/ಬಿಸಿಎ/84 ದಿ. 31.01.1995 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಆದೇಶಗಳಂತೆ ಎಸ್.ಸಿ, ಎಸ್.ಟಿ, ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಮೀಸಲಾತಿ ಅನುಸರಿಸಲಾಗುವುದು.
  - ಆ) ಕಲ್ಯಾಣ-ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಪ್ರವೇಶಾತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.
  - ಇ) ಗಡಿನಾಡು ಕನ್ನಡಿಗರಿಗೂ ಕೂಡ ಮೀಸಲಾತಿ ನೀಡಲಾಗುವುದು.
  - ಈ) ವಿಶೇಷ ಗುಂಪಿನ ಅಭ್ಯರ್ಥಿಗಳಾದ ಎನ್.ಸಿ.ಸಿ/ ಕ್ರೀಡೆ/ ಸ್ಕೌಟ್ಸ್ & ಗೈಡ್ಸ್ / ಡಿಫೆನ್ಸ್ /ಸಿ.ಎ.ಪಿ.ಎಫ್/ ಮಾಜಿ ಸೈನಿಕ/ ಅಂಗವಿಕಲ / ಆಂಗ್ಲೋ ಇಂಡಿಯನ್ ಇವುಗಳಿಗೆ ಮೀಸಲಾತಿ ನೀಡಲಾಗುವುದು.
  - ಉ) ಗಡಿನಾಡು/ಹೊರನಾಡು ಕನ್ನಡಿಗರಿಗೆ ಮೀಸಲಾತಿ ನೀಡಲಾಗುವುದು..
  - ಊ) ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50% ರಷ್ಟು ಸೀಟುಗಳನ್ನು ಕೃಷಿ ಕೋಟದಡಿ ಮೀಸಲಾತಿ ಯನ್ನು ಕಲ್ಪಿಸಲಾಗಿದೆ.

**ಟಿಪ್ಪಣಿ:-**

1. ಸರಕಾರಿ ಆದೇಶ ನಂ. ಎಸ್‌ಡಬ್ಲೂಎಲ್/225/ಬಿಸಿಎ/2000 ದಿ. 30.03.2002 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಈ ಕೆಳಗಿನ ಅಭ್ಯರ್ಥಿಗಳು 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಲ್ಲಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ.ಮೇಲಿನ ಸರಕಾರಿ ಆದೇಶದ ಐಟಂ-1 ರಡಿಯಲ್ಲಿ ನಮೂದಿಸಿದ ವ್ಯಕ್ತಿಗಳ ಮಗ/ಮಗಳು. ಸರಕಾರಿ ಮತ್ತು ಅರೆ ಸರಕಾರಿ ಸಂಸ್ಥೆಗಳಲ್ಲಿ ಎ-ಶ್ರೇಣಿ, ಬಿ-ಶ್ರೇಣಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಮಗ/ಮಗಳು ಅಥವಾ ಖಾಸಗಿ ಸಂಸ್ಥೆಯಲ್ಲಿ ಬಿ-ಶ್ರೇಣಿ ಹುದ್ದೆ ಅಧಿಕಾರಿಯ ವೇತನಕ್ಕೆ ಸಮನಾಗಿ (ರೂ. 43100-83900 ವೇತನ ಶ್ರೇಣಿ) ವೇತನ ಹೊಂದಿರುವ ವ್ಯಕ್ತಿಯ ಮಗ/ಮಗಳು. ಅಭ್ಯರ್ಥಿಯ ಹಾಗೂ ತಂದೆ-ತಾಯಿ/ಪೋಷಕರ ವಾರ್ಷಿಕ ಆದಾಯವು ರೂ. 8.0ಲಕ್ಷಕ್ಕಿಂತಲೂ ಮೀರಿದ್ದರೆ, ಅಭ್ಯರ್ಥಿಯು ಹಾಗೂ ತಂದೆ/ತಾಯಿ/ಪೋಷಕರು ಕರ್ನಾಟಕ ಜಮೀನು ಪರಿಷ್ಕರಣೆ ಕಾಯಿದೆ 1961 ರಲ್ಲಿ ನಿಗದಿ ಪಡಿಸಿದಂತೆ 10 ಯೂನಿಟ್ ಕೃಷಿ ಜಮೀನು ಹೊಂದಿದ್ದರೆ ಹಾಗೂ 20 ಎಕರೆಗಿಂತಲೂ ಹೆಚ್ಚಿನ ಪ್ಲಾಂಟೇಶನ್ ಜಮೀನು ಹೊಂದಿದ್ದರೆ.
2. ಈ ಮೇಲಿನ ಗುಂಪುಗಳಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.
3. ಎಸ್.ಸಿ./ಎಸ್.ಟಿ ಹಾಗೂ ಇತರೆ ಹಿಂದುಳಿದ ವರ್ಗಗಳಲ್ಲಿ (ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ) ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.
4. ವರ್ಟಿಕಲ್ ಮೀಸಲಾತಿಯನ್ವಯ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಇಂತಹ ಮೀಸಲಾತಿ ಸೀಟುಗಳನ್ನು "ಸಾಮಾನ್ಯ ವರ್ಗ" ದ ಸೀಟುಗಳೆಂದು ಪರಿಗಣಿಸಿ, ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

## ಅರ್ಜಿ ಭರ್ತಿ ಮಾಡುವಾಗ ಗಮನಿಸಬೇಕಾದ ಅಂಶಗಳು ಹಾಗೂ ಪ್ರವೇಶ (Admission) ವಿವರಗಳಿಗಾಗಿ ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಅಭ್ಯರ್ಥಿಗಳು ಮೊಬೈಲ್ ನಂಬರ / ದೂರವಾಣಿ / ಇ-ಮೇಲ್ ಐಡಿಯನ್ನು ಆನ್‌ಲೈನ್ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು.
2. **ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ತಾವು ಪ್ರವೇಶ ಪಡೆಯಲು ಬಯಸುವ ಐದು ಪಶುಸಂಗೋಪನಾ ಪಾಲಿಟೆಕ್ನಿಕ್‌ನ ಆಯ್ಕೆಯನ್ನು ತಮ್ಮ ಆದ್ಯತೆಯಂತೆ ಕಡ್ಡಾಯವಾಗಿ ನಮೂದಿಸುವುದು.**
3. ಅರ್ಜಿಯನ್ನು ಸಲ್ಲಿಸಿದ ನಂತರ ಯಾವುದೇ ಕಾರಣಕ್ಕೂ ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ (ಅಂತಿಮವಾಗಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವುದಕ್ಕಿಂತ ಮುಂಚೆ ಎಲ್ಲಾ ವಿವರಗಳನ್ನು ಪರಿಶೀಲಿಸುವುದು).
4. ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ: 01.07.2025
5. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.07.2025
6. **ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ಸಲ್ಲಿಸಿದ ಅರ್ಜಿಗಳ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಯನ್ನು ಈ ಕೆಳಗೆ ನಮೂದಿಸಿದ ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳಲ್ಲಿ ದಿನಾಂಕ: 11.08.2025 ರಿಂದ 13.08.2025 ರವರೆಗೆ ಹಮ್ಮಿಕೊಳ್ಳಲಾಗುವುದು (ಅಭ್ಯರ್ಥಿಗಳು ತಮಗೆ ಸಮೀಪದ ಒಂದು ದಾಖಲಾತಿ ಪರಿಶೀಲನಾ ಕೇಂದ್ರದ ಆಯ್ಕೆಯನ್ನು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಮಾಡಬೇಕು).**

**ಮೂಲ ದಾಖಲಾತಿ ಪರಿಶೀಲನ ಕೇಂದ್ರಗಳು:**

- ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ, ಬೀದರ
  (Veterinary College, Nandinagar, Bidar)
- ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು
  (Veterinary College, Hebbal, Bengaluru)
- ಪಶುವೈದ್ಯಕೀಯ ಮಹಾವಿದ್ಯಾಲಯ, ಹೊಂಬಳ ರಸ್ತೆ, ಗದಗ
  (Veterinary College, Hombal Road, Gadag)
- ಪಶುವೈದ್ಯಕೀಯ ಮಹಾವಿದ್ಯಾಲಯ, ವಿನೋಬನಗರ, ಶಿವಮೊಗ್ಗ
  (Veterinary College, Vinobanagar, Shivamogga)
- ಪಶುವೈದ್ಯಕೀಯ ಮಹಾವಿದ್ಯಾಲಯ, ಗೋಕುಲ ಆವರಣ, ವಿದ್ಯಾನಗರ, ಹಾಸನ
  (Veterinary College, Gokul Campus, Vidyanagar, Hassan)

7. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ತಮಗೆ ಅನುಕೂಲವಾಗುವ ಈ ಮೇಲಿನ ದಾಖಲಾತಿ ಪರಿಶೀಲನ ಕೇಂದ್ರಗಳಲ್ಲಿ ಯಾವುದಾದರು ಒಂದನ್ನು ಆಯ್ಕೆ ಮಾಡಿಕೊಂಡು ಅಭ್ಯರ್ಥಿಗಳು / ಪೋಷಕರು ಖುದ್ದಾಗಿ ಮೂಲದಾಖಲಾತಿಗಳು, ಅರ್ಜಿಯ ಪ್ರತಿ ಹಾಗೂ ಇವುಗಳ ಎರಡು ಪ್ರತಿಗಳೊಂದಿಗೆ ಕಡ್ಡಾಯವಾಗಿ ತೆಗೆದುಕೊಂಡು ದಾಖಲಾತಿಗಳ ಪರಿಶೀಲನೆಯನ್ನು ಪೂರ್ಣಗೊಳಿಸುವುದು.
8. ಪಶುಸಂಗೋಪನಾ ಡಿಪ್ಲೋಮಾ ಕೋರ್ಸ್‌ಗೆ ಅರ್ಹ ಹಾಗೂ ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ:22.08.2025 ರಂದು ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ಪ್ರಕಟಿಸಲಾಗುವುದು.
9. ಸರ್ಕಾರದ ಆದೇಶಗಳ ಅನ್ವಯ ಸೀಟುಗಳನ್ನು ಭರ್ತಿ ಮಾಡಲಾಗುವುದು. ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ತಮ್ಮ ಆಯ್ಕೆ ಮಾಡಿರುವ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳ ಆದ್ಯತೆಗನುಗುಣವಾಗಿ ಆನ್‌ಲೈನ್ ಮುಖಾಂತರ ಸೀಟುಗಳ ಹಂಚಿಕೆ ಮಾಡಲಾಗುವುದು.

10. ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳ ಪ್ರಥಮ ಆಯ್ಕೆ ಪಟ್ಟಿಯನ್ನು ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ದಿನಾಂಕ: 26.08.2025 ರಂದು ಪ್ರಕಟಿಸಲಾಗುವುದು.
11. ಪ್ರಥಮ ಆಯ್ಕೆ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ:28.08.2025 ರಿಂದ 30.08.2025 ರವರೆಗೆ ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲಾ ಮೂಲ ದಾಖಲಾತಿಗಳನ್ನು ಸಲ್ಲಿಸುವುದು. ಒಂದು ವೇಳೆ ನಿಗದಿತ ಸಮಯದಲ್ಲಿ ಪ್ರವೇಶ ಖಾತ್ರಿ ಪಡಿಸದಿದ್ದರೆ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.
12. ಪ್ರಥಮ ಆಯ್ಕೆ ಪಟ್ಟಿಯಲ್ಲಿ ಸೀಟುಗಳು ಭರ್ತಿಯಾಗದೇ ಇದ್ದಲ್ಲಿ, ಎರಡನೇ ಆಯ್ಕೆ ಪಟ್ಟಿ ಸಿದ್ಧಪಡಿಸಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ದಲ್ಲಿ ದಿನಾಂಕ: 06.09.2025 ರಂದು ಪ್ರಕಟಿಸಲಾಗುವುದು.
13. ಎರಡನೇ ಆಯ್ಕೆ ಪಟ್ಟಿಯ ಪ್ರಕಾರ ಪಶುಸಂಗೋಪನಾ ಪಾಲಿಟೆಕ್ನಿಕ್ ಕೋರ್ಸ್‌ಗೆ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ: 08.09.2025 ರಿಂದ 10.09.2025 ರವರೆಗೆ ಸಂಬಂಧಪಟ್ಟ ಪಶುಸಂಗೋಪನಾ ಪಾಲಿಟೆಕ್ನಿಕ್‌ಗೆ ಹೋಗಿ ಶುಲ್ಕ ಪಾವತಿಸುವುದರ ಮೂಲಕ ಪ್ರವೇಶ ಖಾತ್ರಿ ಪಡಿಸುವುದು ಹಾಗೂ ಎಲ್ಲಾ ಮೂಲ ದಾಖಲಾತಿಗಳು ಸಲ್ಲಿಸುವುದು. ಒಂದು ವೇಳೆ ನಿಗದಿತ ಸಮಯದಲ್ಲಿ ಪ್ರವೇಶ ಖಾತ್ರಿ ಪಡಿಸದಿದ್ದರೆ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು.
14. **ಅಂತಿಮ ಸುತ್ತಿನ ಸೀಟು ಹಂಚಿಕೆ ಪೂರ್ಣಗೊಳ್ಳುವವರೆಗೂ ಅಭ್ಯರ್ಥಿಗಳು ಇತ್ತೀಚಿನ ಮಾಹಿತಿ / ವಿಷಯಗಳಿಗೆ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ನೊಂದಿಗೆ ಸದಾ ಸಂಪರ್ಕದಲ್ಲಿರಬೇಕು.**
15. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿ ಅಭ್ಯರ್ಥಿಗೆ ಪ್ರತ್ಯೇಕವಾಗಿ ಮಾಹಿತಿಯನ್ನು ತಿಳಿಸುವುದಿಲ್ಲ.
16. ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆ, ಇ-ಮೇಲ್ ಅಭ್ಯರ್ಥಿ ಅಥವಾ ಪೋಷಕರದ್ದಾಗಿರಬೇಕು. ಏಕೆಂದರೆ, ವಿಶ್ವವಿದ್ಯಾಲಯದಿಂದ ಯಾವುದೇ ವಿಷಯಗಳನ್ನು ತುರ್ತು ಸಂದರ್ಭದಲ್ಲಿ ಮಾತ್ರ ಎಸ್.ಎಂ.ಎಸ್. ಅಥವಾ ಇ-ಮೇಲ್ ಮುಖಾಂತರ ಕಳುಹಿಸಲಾಗುತ್ತದೆ.
17. ಮೊದಲನೆಯ ಸೆಮಿಸ್ಟರ್ ತರಗತಿಗಳ ಪ್ರಾರಂಭದ ದಿನಾಂಕ: 15.09.2025.
18. ಅಭ್ಯರ್ಥಿಗಳು / ಪೋಷಕರು ಯಾವುದೇ ಇತ್ತೀಚಿನ ಸುದ್ದಿ ಅಥವಾ ಮಾಹಿತಿಗಾಗಿ ವಿಶ್ವವಿದ್ಯಾಲಯದ ಜಾಲತಾಣ (https://kvafsu.edu.in/admission.html) ವನ್ನು ದಿನಾಲು ನೋಡಬೇಕು.
19. ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪಶುಸಂಗೋಪನಾ ಡಿಪ್ಲೊಮಾ ಕೋರ್ಸ್‌ನ ಪ್ರವೇಶಕ್ಕೆ ಸಂಬಂಧಿಸಿದಂತೆ ನೀಡಲಾಗುವ ಸೂಚನೆಗಳು, ಅಧಿಸೂಚನೆಗಳು ಮತ್ತು ಪ್ರಕಟಣೆಗಳನ್ನು ಸರಿಯಾಗಿ ಗಮನಿಸದ ಕಾರಣದಿಂದ ಉಂಟಾಗುವ ಯಾವುದೇ ಸಮಸ್ಯೆ / ತೊಂದರೆಗೆ ವಿಶ್ವವಿದ್ಯಾಲಯವು ಹೊಣೆಯಾಗುವುದಿಲ್ಲ.
20. ಅಭ್ಯರ್ಥಿಯು/ಪೋಷಕರು ತಮ್ಮ ಅರ್ಜಿಯಲ್ಲಿ ಸಲ್ಲಿಸಿರುವ ಯಾವುದೇ ದಾಖಲೆಗಳಲ್ಲಿ ನೀಡಿರುವ ಮಾಹಿತಿಯು ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯ ಪ್ರವೇಶವನ್ನು ಆತನ/ಆಕೆಯ ಕೋರ್ಸ್‌ನ ಅವಧಿಯ ಯಾವುದೇ ಸಮಯದಲ್ಲಾದರೂ ಅಥವಾ ಡಿಪ್ಲೊಮಾ ಪಡೆದ ನಂತರವೂ ರದ್ದುಗೊಳಿಸಲಾಗುತ್ತದೆ ಹಾಗೂ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.
21. ಪ್ರವೇಶದ ವಿವರಣಾ ಪತ್ರಿಕೆ (prospectus) ಯಲ್ಲಿ ನಿಗದಿಪಡಿಸಿದಂತೆ ಪ್ರವೇಶದ ಆನ್‌ಲೈನ್ ಅರ್ಜಿಯಲ್ಲಿ ಎಲ್ಲ ವಿವರಗಳನ್ನು ನಮೂದಿಸಬೇಕು ಹಾಗೂ ಆನ್‌ಲೈನ್ ಅರ್ಜಿಯೊಂದಿಗೆ ಅಭ್ಯರ್ಥಿಗಳು ತಮ್ಮ ಸೂಕ್ತ ದಾಖಲೆಗಳ ಪ್ರತಿಗಳನ್ನು ಅಪ್‌ಲೋಡ್ ಮಾಡಬೇಕು ಮತ್ತು ಅಪೂರ್ಣ ಆನ್‌ಲೈನ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
22. ಈ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅನಿವಾರ್ಯ ಕಾರಣಗಳಿಂದ ಯಾವುದೇ ಬದಲಾವಣೆಯಾದಲ್ಲಿ ಅದನ್ನು ವಿಶ್ವವಿದ್ಯಾಲಯದ ಅಂತರ್ಜಾಲ (www.kvafsu.edu.in) ದ ಮೂಲಕ ಪ್ರಕಟಿಸಲಾಗುವುದು. ಈ ಕುರಿತಂತೆ ಪ್ರತಿ ಅಭ್ಯರ್ಥಿಗೆ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.
23. ಈ ಪ್ರವೇಶವು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆ-ಕಾನೂನುಗಳಿಗೆ ಹಾಗೂ ಸರಕಾರಿ ಆದೇಶಗಳ ಅನ್ವಯ ಅಭ್ಯರ್ಥಿಯ ಅರ್ಹತೆಯನ್ನು ಅವಲಂಬಿಸಿದೆ.
24. **ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್ ಯುವ ಜನತೆಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಸತತವಾಗಿ ಪಶುಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಪಶು ಸಂಬಂಧಿತ ಉತ್ಪಾದನೆಯನ್ನು ಹೆಚ್ಚಿಸುವ ಕುರಿತು ಜ್ಞಾನವನ್ನು ಪಡೆಯುವಲ್ಲಿ ನೆರವಾಗುತ್ತದೆ. ಹಾಗೂ ಐವಿಸಿ ಕಾಯಿದೆ, 1984ರ ಸೆಕ್ಷನ್ 30 (ಬಿ) ಅಡಿಯಲ್ಲಿ ಕರ್ನಾಟಕ ಸರ್ಕಾರವು ವ್ಯಾಖ್ಯಾನಿಸಿದಂತೆ ನೋಂದಾಯಿತ ಪಶುವೈದ್ಯಕೀಯ ವೈದ್ಯರ ಮೇಲ್ವಿಚಾರಣೆ ಮತ್ತು ನಿರ್ದೇಶನದ ಅಡಿಯಲ್ಲಿ "ಅಪ್ರಧಾನ ಪಶುವೈದ್ಯಕೀಯ ಸೇವೆಗಳಿಗೆ" ಸೀಮಿತವಾದ ಸೇವೆಗಳನ್ನು ನಿರ್ವಹಿಸಲು ಮಾತ್ರ ಅರ್ಹರಾಗಿರುತ್ತಾರೆ. ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸರ್ಕಾರದ ವತಿಯಿಂದ ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ್ನು ಮುಗಿಸಿದ ಅಭ್ಯರ್ಥಿಗಳಿಗೆ ಯಾವುದೇ ಖಚಿತ ಸರ್ಕಾರಿ ಉದ್ಯೋಗದ ಕುರಿತು ಭರವಸೆ ಇರುವುದಿಲ್ಲ.**

**ಮುಖ್ಯ ಸೂಚನೆ:** ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ಮಾಹಿತಿ ತಪ್ಪು ಅಥವಾ ನಿಜವಲ್ಲವೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು ಹಾಗೂ ಯಾವುದೇ ಹಂತದಲ್ಲಾದರೂ ಅಭ್ಯರ್ಥಿಗೆ ನೀಡಿರುವ ಪ್ರವೇಶವನ್ನು ರದ್ದುಪಡಿಸಲಾಗುವುದು ಮತ್ತು ಅಭ್ಯರ್ಥಿಯು ಪಾವತಿಸಿರುವ ಸಂಪೂರ್ಣ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಡಿಪ್ಲೊಮಾ (ಪಶು ಸಂಗೋಪನೆ) ತೇರ್ಗಡೆ ಹೊಂದಿದ ನಂತರವು, ಡಿಪ್ಲೊಮಾ (ಪಶು ಸಂಗೋಪನೆ)/ಡಿಪ್ಲೊಮಾ ಪ್ರಮಾಣಪತ್ರವನ್ನು ಹಿಂಪಡೆಯುವ ಅಧಿಕಾರವನ್ನು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಹೊಂದಿರುತ್ತದೆ.

**ಮೀಸಲಾತಿ ವಿವರಗಳು**

**I. ಕಲ್ಯಾಣ ಕರ್ನಾಟಕ 371 ಜೆ ರ ಅಡಿಯಲ್ಲಿ ಮೀಸಲಾತಿ**

ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಪ್ರವೇಶಾತಿ ವಿನಿಯಮಗಳು ಆದೇಶ, **2013**"ರ ಅನುಸಾರವಾಗಿ ಮೀಸಲಾತಿ

- ಬೀದರ್, ಕಲ್ಬುರ್ಗಿ (ಗುಲ್ಬರ್ಗಾ), ಯಾದಗಿರಿ, ರಾಯಚೂರು,ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳನ್ನು ಒಳಗೊಂಡಿರುವ ಹೈದರಾಬಾದ್-ಕರ್ನಾಟಕ ಪ್ರದೇಶವೆಂದು ಕರೆಯಲಾಗು ರಾಜ್ಯದ ಭಾಗವನ್ನು "ಸ್ಥಳೀಯ ಪ್ರದೇಶ" ವೆಂಬುದಾಗಿ ಪರಿಗಣಿಸಲಾಗುತ್ತದೆ.
- ಮೇಲೆ ಹೇಳಿದ "ಸ್ಥಳಿಯ ಪ್ರದೇಶ"ದಲ್ಲಿನ ಸ್ಥಳಗಳಲ್ಲಿ ಇರುವ ಯಾವುದೇ ಪ್ರಾದೇಶಿಕ ವಿಶ್ವವಿದ್ಯಾಲಯ ಅಥವಾ ಶೈಕ್ಷಣಿಕ ಸಂಸ್ಥಯಲ್ಲಿನ, ಪ್ರತಿಯೊಂದು ವ್ಯಾಸಂಗದ ಕೋರ್ಸಿನಲ್ಲಿ ಲಬ್ಯವಿರುವ ಸೀಟುಗಳ ಪೈಕಿ, ಶೇ.70ರಷ್ಟು ಸೀಟುಗಳನ್ನು ಅಂಥ ವಿಶ್ವವಿದ್ಯಾಲಯ ಅಥವಾ ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದಂತೆ, ಸ್ಥಳೀಯ ವಿದ್ಯಾರ್ಥಿಗಳಿಗೆ ಮೀಸಲಿರಿಸಲಾಗುತ್ತದೆ.
- ರಾಜ್ಯಾದಂತ ಇರುವ ವಿಶ್ವವಿದ್ಯಾಲಯಗಳಲ್ಲಿ ಅಥವಾ ರಾಜ್ಯಾದಾದ್ಯಂತ ಇರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ಒದಗಿಸಲಾಗಿರುವ ಪ್ರತಿಯೊಂದು ವ್ಯಾಸಂಗದ ಕೋರ್ಸಿನಲ್ಲಿ ಲಬ್ಯವಿರುವ ಸೀಟುಗಳ ಪೈಕಿ, ಶೇ.8ರಷ್ಟು ಸೀಟುಗಳನ್ನು ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತದೆ.
- ಹೈದರಾಬಾದ್-ಕರ್ನಾಟಕ ಮೀಸಲಾತಿ (ಅನುಚ್ಛೇದ 371(ಜೆ)) ಯನ್ನು ಕೋರುವ ಅಭ್ಯರ್ಥಿಗಳು ಸಂಬಂದಪಟ್ಟ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಆರ್ ಡಿ ಸಂಖ್ಯೆಯಿರುವ 'ಅನುಬಂಧ-ಎ' ನೀಡಿರುವ ಪ್ರಮಾಣಪತ್ರ

**II. ಹೊರನಾಡು ಕನ್ನಡಿಗರು**

ಅಭ್ಯರ್ಥಿಯ ತಂದೆ ಅಥವಾ ತಾಯಿಯ ಮಾತೃಭಾಷೆ ಕನ್ನಡ/ತುಳು ಅಥವಾ ಕೊಡವ ಭಾಷೆಯಾಗಿರಬೇಕು ಹಾಗೂ ತಂದೆ ತಾಯಿಯರಲ್ಲಿ ಒಬ್ಬರು ಕರ್ನಾಟಕದ ಆದಿವಾಸಿಗಳಾಗಿರಬೇಕು. ಅಂತಹ ಅಭ್ಯರ್ಥಿಗಳು ಕರ್ನಾಟಕದ ಹೊರಗಿನ ವಿಶ್ವವಿದ್ಯಾನಿಲಯ ಅಥವಾ ಬೋರ್ಡ್ ಅಥವಾ ಇತರ ಸಂಸ್ಥೆಗಳಿಂದ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ 1ನೇ ಮೇ, 2014ರ ದಿನಾಂಕದಂದು ಕರ್ನಾಟಕ ರಾಜ್ಯದ ಹೊರಗೆ ವಾಸಿಸುತ್ತಿರಬೇಕು. ಹಾಗೂ ಅಭ್ಯರ್ಥಿಯು 01 ರಿಂದ 10ನೇ ತರಗತಿ/ಎಸ್.ಎಸ್.ಎಲ್.ಸಿ. (SSLC) ವರೆಗೆ ಕನ್ನಡ ಭಾಷೆಯನ್ನು ವ್ಯಾಸಂಗ ಮಾಡಿರಬೇಕು.

**III. ಗಡಿನಾಡು ಕನ್ನಡಿಗರು**

ಕನ್ನಡ/ತುಳು/ಕೊಡವ ಭಾಷೆಗಳು ಮಾತೃಭಾಷೆಯಾಗಿರುವಂತಹ ಅಭ್ಯರ್ಥಿಯು 01 ರಿಂದ 10ನೇ/ಎಸ್.ಎಸ್.ಎಲ್.ಸಿ. ತರಗತಿಯವರೆಗಿನ ಅವಧಿಯಲ್ಲಿ ಕನ್ನಡ ಭಾಷೆ ವಿವಾದಾತ್ಮಕ ವಾಗಿರುವಂತಹ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೋಲಾಪುರ ಅಥವಾ ಅಕ್ಕಲ್‌ಕೋಟ್ ಅಥವಾ ಜತ್ತ ಅಥವಾ ಗಡಿಂಗ್ಲಜ್ ತಾಲ್ಲೂಕುಗಳು ಅಥವಾ ಕೇರಳ ರಾಜ್ಯದ ಕಾಸರಗೋಡು ಅಥವಾ ಹೊಸದುರ್ಗ ತಾಲ್ಲೂಕುಗಳಲ್ಲಿ ಏಳು ವರ್ಷದವರೆಗೆ ನಿವಾಸಿಯಾಗಿದ್ದು ವ್ಯಾಸಂಗ ಮಾಡಿರಬೇಕು ಮತ್ತು ಕನ್ನಡ ಮಾಧ್ಯಮ ಅಥವಾ ಕನ್ನಡವನ್ನು ಒಂದು ಭಾಷೆಯಾಗಿ ಅಭ್ಯಾಸಮಾಡಿರಬೇಕು.

**IV. ರಕ್ಷಣಾ ಸೇವೆ**

ಅಭ್ಯರ್ಥಿಯು ರಕ್ಷಣಾ ಸೇವಾ ಸಿಬ್ಬಂದಿಯ ಮಗ ಅಥವಾ ಮಗಳಾಗಿದ್ದಲ್ಲಿ ಆ ಅಭ್ಯರ್ಥಿಯು 10ನೇ ತರಗತಿ/ಎಸ್.ಎಸ್.ಎಲ್.ಸಿ. ವ್ಯಾಸಂಗದ ಅವಧಿಯಲ್ಲಿ ಸಿಬ್ಬಂದಿಯು ಕರ್ನಾಟಕದಲ್ಲಿ ಕನಿಷ್ಠ ಒಂದು ವರ್ಷದವರೆಗೆ ನಿರಂತರವಾಗಿ ಸೇವೆ ಸಲ್ಲಿಸಿರಬೇಕು. ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿನ ಸರ್ಕಾರದ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.

**V. ಮಾಜಿ ಯೋಧರು**

ಅಭ್ಯರ್ಥಿಯು ಮಾಜಿ ಯೋಧರ ಮಗ ಅಥವಾ ಮಗಳಾಗಿದ್ದಲ್ಲಿ ಆ ಸಿಬ್ಬಂದಿಯು ಸೇವೆಗೆ ವರದಿಮಾಡಿಕೊಂಡ ಸಮಯದಲ್ಲಿ ತನ್ನ ಹುಟ್ಟೂರನ್ನು ಕರ್ನಾಟಕ ರಾಜ್ಯವೆಂದು ಘೋಷಣೆ ಮಾಡಿರಬೇಕು. ಇದಕ್ಕೆ ದಾಖಲೆಯಾಗಿ ಉಪನಿರ್ದೇಶಕರು, ಯೋಧರ ಕಲ್ಯಾಣ ಮತ್ತು ಪುನರ್‌ವಸತಿ ವ್ಯವಸ್ಥೆ ಇವರಿಂದ ಪಡೆದ ಪ್ರತಿಯನ್ನು ಒದಗಿಸಬೇಕು. ಅಭ್ಯರ್ಥಿಯು ಭಾರತದ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಮಂಡಳಿ ಅಥವಾ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**VI. ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿ ಮಕ್ಕಳಿಗೆ ಮೀಸಲಾತಿ**

ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿ ಮಕ್ಕಳಿಗೆ ಮೀಸಲಾತಿಯ ಅರ್ಹತೆಯನ್ನು ಕೋರುವ ಅಭ್ಯರ್ಥಿಗಳು, ತಮ್ಮ ಪೋಷಕರು ಕೆಲಸಕ್ಕೆ ಸೇರುವ ಸಮಯದಲ್ಲಿ ಕರ್ನಾಟಕದಲ್ಲಿರುವ ಒಂದು ಸ್ಥಳವನ್ನು ತನ್ನ ಸ್ವಂತ ಪಟ್ಟಣ/ಸ್ವಂತ ಊರು ಎಂದು ಘೋಷಿಸಿಕೊಂಡಿರುವ ಪ್ರಮಾಣಪತ್ರ

**VII. ರೈತರ/ಕೃಷಿ ಕಾರ್ಮಿಕರು**

ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ.50% ರಷ್ಟು ಸೀಟುಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ನ ಪ್ರವೇಶಾತಿಗೆ ಮೀಸಲಿಡಲಾಗಿದೆ. ಅಭ್ಯರ್ಥಿಗಳು ಈ ಕೋಟಾದಡಿ ಪ್ರವೇಶ ಬಯಸಿದ್ದಲ್ಲಿ ಈ ಕೆಳಕಂಡ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದು ಲಗತ್ತಿಸಬೇಕು (ನಮೂನೆಗಳನ್ನು ಲಗತ್ತಿಸಲಾಗಿದೆ).

a. ವ್ಯವಸಾಯಗಾರರ ಪ್ರಮಾಣ ಪತ್ರ / ಕೃಷಿ ಮತ್ತು ಕೃಷಿ ಸಂಬಂಧಿತ ಕೂಲಿ ಕಾರ್ಮಿಕರ ಪ್ರಮಾಣ ಪತ್ರ - RD ಸಂಖ್ಯೆಯೊಂದಿಗೆ ಕಂದಾಯ ಇಲಾಖೆಯಲ್ಲಿ ಕೊಡುವ ಪ್ರಮಾಣ ಪತ್ರ.
b. ಅವಿಭಾಜ್ಯ ಕುಟುಂಬವಾದಲ್ಲಿ ಪೂರಕವಾಗಿ ವಂಶವೃಕ್ಷ ಪ್ರಮಾಣ ಪತ್ರ ಕೃಷಿಕರ ಕೋಟಾದಡಿಯಲ್ಲಿ ಅರ್ಜಿಯನ್ನು ಪರಿಗಣಿಸಲು ಕಡ್ಡಾಯವಾಗಿ ಲಗತ್ತಿಸುವುದು RD ಸಂಖ್ಯೆ ಮತ್ತು QR ಕೋಡ್‌ನೊಂದಿಗೆ ತಹಶೀಲ್ದಾರ್ ರವರು ಕೊಡುವ ಪ್ರಮಾಣ ಪತ್ರ.

**VIII. ಗ್ರಾಮೀಣ ಮೀಸಲಾತಿ**

ಕರ್ನಾಟಕ ಮುನಿಸಿಪಾಲಿಟಿ ಅಧಿನಿಯಮ 1964 ಅಥವಾ ಕರ್ನಾಟಕ ಮುನ್ಸಿಪಲ್ ಮಂಡಳಿಗಳ ಅಧಿನಿಯಮ 1976ರಲ್ಲಿ ಸೂಚಿಸಿರುವಂತೆ ಸರ್ಕಾರದ ಆದೇಶ ಸಂ. ED 01 TEC 2002, ಬೆಂಗಳೂರು, ದಿನಾಂಕ 1-2-2002ರ ಅನ್ವಯ ಹಾಗೂ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳ ರಾಜ್ಯದ ಸರ್ಕಾರಿ ಸೇವೆಗಳ ಹುದ್ದೆಗಳಿಗೆ ನೇಮಕಾತಿಯ ಮೀಸಲಾತಿ ಅಧಿನಿಯಮ, 2000-2001ರ ಕರ್ನಾಟಕ ಅಧಿನಿಯಮ 1ರಲ್ಲಿ ನಿರ್ದಿಷ್ಟಪಡಿಸಿರುವಂತೆ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಸಂಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲಿನ ದೊಡ್ಡ ನಗರ ಪ್ರದೇಶಗಳನ್ನು, ಸಣ್ಣ ನಗರ ಪ್ರದೇಶಗಳನ್ನು ಅಥವಾ ಟ್ರಾನ್ಸಿಷನಲ್ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಸ್ಥಳಗಳಲ್ಲಿ ವ್ಯಾಸಂಗ ಮಾಡಿರುವಂತಹ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ.

ಕೆನೆಪದರದಡಿ ಬಾರದಿರುವಂತಹ ತಂದೆ ತಾಯಿಗಳ ಮಕ್ಕಳು ಹಾಗೂ ಶೆಡ್ಯೂಲ್-2ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ಸಂಪೂರ್ಣವಾಗಿ 10 ವರ್ಷಗಳು ವ್ಯಾಸಂಗ ಮಾಡಿರುವಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೂ ನಗರ ಪ್ರದೇಶವೆಂದು ಅಧಿಸೂಚಿತವಾಗುವ ಮೊದಲು ಈ ಪ್ರದೇಶಗಳಲ್ಲಿ ಅಭ್ಯರ್ಥಿಗಳು 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.

**ಸೂಚನೆ:**

1. ಯಾವುದೇ ಕಾಲಮಿಗೆ ಸಂಬಂಧಿಸಿದಂತೆ ಸಲ್ಲಿಸಿದ ದಾಖಲೆಗಳು ತಪ್ಪು ಅಥವಾ ನಿಜವಲ್ಲವೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಅಭ್ಯರ್ಥಿಯ ಪ್ರವೇಶವನ್ನು ರದ್ದುಪಡಿಸಲಾಗುವುದು ಮತ್ತು ಅಭ್ಯರ್ಥಿಯು ಪಾವತಿಸಿರುವ ಸಂಪೂರ್ಣ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಪೋಷಕರ ವ್ಯಾಸಂಗ, ಉದ್ಯೋಗ ಮುಂತಾದವುಗಳ ಆಧಾರದ ಮೇಲೆ ಅಭ್ಯರ್ಥಿಯು ಆಯ್ಕೆಯಾಗಿದ್ದಲ್ಲಿ ಪೋಷಕರು ಮತ್ತು ಅಭ್ಯರ್ಥಿಯ ಸಂಬಂಧವನ್ನು ದೃಢಪಡಿಸುವ ದಾಖಲೆ ಪತ್ರಗಳನ್ನು ಒದಗಿಸಬೇಕು.
